ಶ್ರೀ ಕಡಿದಾಳ್ ಮಂಜಪ್ಪ.—ಮಂಜೂರಾಗಿರುವುದು ನೆನಪಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಈಗಲಾದರೂ ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಣ ಒದಗಿದರೆ ಮಾಡಬಹುದು.

ಶ್ರೀ ಯು. ಎಂ. ಮಾದಪ್ಪ.—ಈ ಬಾವಿಗಳನ್ನು ರೂರಲ್ ವಾಟರ್ ಸಪ್ಲೈ ಸ್ಕೀಮಿನಲ್ಲಿ ಅಲ್ಲವೆ ಮಾಡಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದಮೇಲೆ ಸರ್ಕಾರದ ನೀತಿಗನುಸಾರವಾಗಿ ಗ್ರಾಮಾಂತರಗಳಿಗೆ ನೀರು ಸರಬರಾಯಿ ಮಾಡಲು ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ತ್ತೇವೆ.

ಶ್ರೀ ಎಂ. ರಾಜಶೇಖರಮೂರ್ತಿ.—ಹೆಗ್ಗವಾಡಿಪುರ ಗ್ರಾಮದಲ್ಲಿ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ನುಮಾರು ಮೂರು ಮೈಲಿ ದೂರದಿಂದ ಅಲ್ಲಿನವರು ಕುಡಿಯುವ ನೀರನ್ನು ತರಬೇಕೆಂಬುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆ ಕಡೆ ಹೋಗಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—1952ರಲ್ಲಿ ಆ ಕಡೆ ಪ್ರವಾಸ ಬಂದಾಗ ಗ್ರಾಮಸ್ಥರು ಅರ್ಜಿ ಕೊಡಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ಆ ಗ್ರಾಮಸ್ಥರು 3 ಮೈಲಿ ದೂರದಿಂದ ನೀರು ತರಬೇಕಾಗಿರುವುದರಿಂದ ಅಲ್ಲಿ ನೀರಿಗೆ ತೊಂದರೆಯೆಂಬುದನ್ನರಿತು ಆ ಊರಿಗೆ ಹೆಣ್ಣುಮಕ್ಕಳನ್ನು ಕೊಡುವುದು ಸಹ ಕಡಮೆಯಾಗಿ ಅನೇಕ ತೊಂದರೆಗಳು ನಿಂತುಹೋಗಿರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ವರದಿ ತರಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಬಾವಿಗಳಿಗೆ 3 ಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಲೋಕಲ್ ಬಾಡೀಸ್ ಎಂದು ಗೊತ್ತಾಗಿದೆ.

ಶ್ರೀ ಬಿ. ರಾಚಯ್ಯ.—ಈ ಬಾವಿಗಳಿಗೆ ಲೋಕಲ್ ಬಾಡೀಸ್ ಕಾಂಟ್ರಿಬ್ಯೂಷ್ಷ ಕೊಟ್ಟಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿರಬಹುದು.

ಶ್ರೀ ಬಿ. ರಾಚಯ್ಯ.—ಸರ್ಕಾರದ ಕೋಟಾ ಕೊಟ್ಟಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಈ ಬಾವಿಗಳು ಯಾವ ಇರಾಖೆ ಆಡಳಿತಕ್ಕೊಳಪಟ್ಟಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಬಿ. ರಾಚಯ್ಯ.—ಇದರ ಮೇಲ್ವಿಚಾರಣೆ ತಮಗೆ ಸೇರಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಎಕ್ಸಿಕ್ಯೂಟ್ ಮಾತ್ರ ಮಾಡುತ್ತಾರೆ.

ಶ್ರೀ ಬಿ. ರಾಚಯ್ಯ.—ಈ ಬಾವಿಗಳನ್ನು ತೆಗೆಯುವುದು ಯಾರ ಜವಾಬ್ದಾರಿ ?

ಶ್ರೀ ಕಡಿದಾಳ್ ಮಂಜಪ್ಪ.—ಲೋಕಲ್‌ಬಾಡೀಸ್ ಹಣ ಕೊಟ್ಟರೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಕರ್ತವ್ಯ ಬಾವಿ ತೆಗೆಸುವುದು.

ಶ್ರೀ ಬಿ. ರಾಚಯ್ಯ.—ಇಷ್ಟು ಹಣ ಖರ್ಚು ಮಾಡಿದರೂ ಸಹ ಕುಡಿಯುವ ನೀರಿಗೆ ಅನುಕೂಲವಾಗದಿದ್ದರೆ ಸರ್ಕಾರಕ್ಕೆ ನಷ್ಟವಲ್ಲವೆ ?

Sri Kadidal MANJAPPA.—It is a matter of opinion.

Collection of revenue in Famine-stricken areas

Q.—1040. Sri G. PAPANNA (Sidlaghatta.—Chikballapur).—

Will the Government be pleased to state :—

(*a*) whether the collection of revenue that was suspended during the last three years in the famine-stricken areas would be remitted or collected ;

(*b*) whether the effect it would have on the economic condition of the ryot has been considered if it is ordered to be collected ?

A.—Sri Kadidal MANJAPPA (Minister for Revenue and Public Works).—

(*a*) As a measure of relief to the agriculturists, Government have directed that wherever assessment for the past two or more years has been suspended, two years' assessment may be collected in four monthly instalments during the currrent collection season and that the balance may be collected in like manner during the next year, *i.e.*, 1954-55.

(*b*) Yes, *vide* reply to clause (*a*).

ಶ್ರೀ ಜಿ. ಪಾಪಣ್ಣ.—ಕ್ಷಾಮ ಕಾಲದಲ್ಲಿ ಎಷ್ಟು ವರ್ಷಗಳ ಕಂದಾಯವನ್ನು ಸಸ್ಪೆಂಡ್ ಮಾಡಿದರೂ ಸುಭಿಕ್ಷ ಬಂದಾಗ ವಸೂಲು ಮಾಡಬೇಕು ; ಮುಂದಿನ ವರ್ಷದ ಕಂದಾಯ ಮಾತ್ರ ವಸೂಲು ಮಾಡಬೇಕೆಂಬ ನಿಯಮವಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಉತ್ತರದಲ್ಲೇ ಸ್ಪಷ್ಟಪಡಿಸಿದೆ. 3 ವರ್ಷದ ಕಂದಾಯ ರಿಮಿಷ್ಷ ಮಾಡಿದ್ದರೆ ಅದರಲ್ಲಿ 2 ವರ್ಷದ ಸಸ್ಪೆಂಡೆಡ್ ಪೋರ್ಷನ್ ಮಾತ್ರ ವಸೂಲು ಮಾಡಬೇಕು, ಬಾಕಿ ಉಳಿದಿರುವುದನ್ನು ಬರುವ ವರ್ಷ ವಸೂಲು ಮಾಡಬೇಕು ಎಂದು ಹೇಳಿದೆ.

ಶ್ರೀ ಜಿ. ಪಾಪಣ್ಣ.—ಒಂದು ವರ್ಷದ್ದು ಮಾತ್ರ ವಸೂಲು ಮಾಡಬೇಕೆಂದು ನಿಯಮವಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಇಲ್ಲ.

ಶ್ರೀ ಜಿ. ಪಾಪಣ್ಣ.—ಎರಡು ವರ್ಷ ಸಸ್ಪೆಂಡ್ ಮಾಡಿರುವುದನ್ನು ವಸೂಲು ಮಾಡಿದರೆ ಕ್ಷಾಮ ಪರಿಹಾರ ನೀಡಿದ ಹಾಗಾಯಿತೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮಳೆ ಬೆಳೆ ಚೆನ್ನಾಗಿದೆ. ಕೊಡುವುದಕ್ಕೆ ಸಾಧ್ಯವೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಜಿ. ಪಾಪಣ್ಣ.—ಕ್ಷಾಮ ಕಾಲದಲ್ಲಿ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಹಳೆಯ ಪಾತ್ರೆಗಳನ್ನು ಕೊಂಡುಕೊಳ್ಳಲು ಕೆಲವರು ಅಂಗಡಿಗಳನ್ನಿಟ್ಟಿದ್ದರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಪ್ರವಾಸ ಮಾಡಿದ್ದೇನೆ. ಆದರೆ ಅಂಥ ಅಂಗಡಿ ನೋಡಲಿಲ್ಲ.

ಶ್ರೀ ಜಿ. ನಾರಾಯಣಗೌಡ.—ಕಂದಾಯ ಮಾಫಿ ಮಾಡಬೇಕಾದರೆ 2 ವರ್ಷ ಒಂದೇ ಸಮನಾಗಿ ಮಳೆ ಬೆಳೆಯಿಲ್ಲದಿರಬೇಕು. ಇಲ್ಲದಿದ್ದರೆ ಸಸ್ಪೆಂಡ್ ಮಾಡಿ ಔಟ್‌ರೈಟ್ ರೆಮಿಷನ್ ಕೊಡುವುದಿಲ್ಲವೆಂದು ಕಾನೂನಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿರುವ ಹಾಗೆ ಇಲ್ಲ.

ಶ್ರೀ ಜಿ. ನಾರಾಯಣಗೌಡ. 1924-25ನೆಯ ಸಾಲಿನಲ್ಲಿ ಹಾಗೆ ಕೊಟ್ಟಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು. ವಿಚಾರಿಸುತ್ತೇನೆ.

Lift Irrigation and Power Supply

Q.—492. Sri N. HUCHMASTHY GOWDA (Huliyurdurga).

Will the Government be pleased to state :—

(*a*) the number of wells to which electricity has been supplied for lift irrigation in the State up to October 1947 (districtwar figures to be given) ;

(*b*) the number of wells provided with electricity from October 1947 to the end of 1952 (districtwar figures to be furnished) ;

(*c*) the number of wells that were provided with electricity during the year 1952-53 ;

(*d*) the number of wells that were provided with electricity during the year 1953-54 up to the end of December ;

(*e*) the subsidy received from the Central Government during the periods specified above, for this item ; and the amount provided by the State Government during these periods ?

A.—Dr. R. NAGAN GOWDA (Minister for Agriculture).—

	District		*Number of wells*
(*a*)	Bangalore	...	627
	Mysore	...	37
	Mandya	...	16
	Kolar	...	319
	Tumkur	...	29
	Chikmagalur	...	2
	Chitaldrug	...	50
	Shimoga	...	6
	Total	...	1,086
(*b*)	Bangalore	...	623
	Mysore	...	83
	Mandya	...	22
	Kolar	...	1,061
	Tumkur	...	164
	Chikmagalur	...	5
	Chitaldrug	...	290
	Shimoga	...	33
	Hassan	...	19
	Total	...	2,300
(*c*)	Bangalore	...	226
	Mysore	...	24
	Mandya	...	10
	Tumkur	...	202
	Kolar	...	288
	Chikmagalur	...	3
	Chitaldrug	...	172
	Hassan	...	10
	Shimoga	...	32
	Total	...	967
(*d*)	Bangalore	...	158
	Mysore	...	38
	Mandya	...	19
	Tumkur	...	181
	Kolar	...	172
	Chikmagalur	...	6
	Chitaldrug	...	120
	Shimoga	...	25
	Hassan	...	120
	Total	...	839

Note.—Figures for Bellary District have not been given as yearwise figures are not readily available. There were 80 wells provided with power supply on 1st October 1953 and estimates for supplying power to 31 wells have been sanctioned since then.